ಹೊಸ ಹಸಿರು ಕಾರ್ಡುಗಳನ್ನು ನೀಡುವುದು.

469 - ಶ್ರೀ ಬಸವರಾಜ ರಾಯರೆಡ್ಡಿ (ಯಲ್ಬುರ್ಗ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸ ಹಸಿರು ಕಾರ್ಡುಗಳನ್ನು ವಿತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಡಾ. ಅಂಬೇಡ್ಕರ್ ಅವರ ಶತಾಬ್ದಿಯ ಪ್ರಯುಕ್ತ ಹಸಿರು ಕಾರ್ಡುಗಳ ಮುಖ ಪುಟದಲ್ಲಿ ಡಾ. ಅಂಬೇಡ್ಕರ್ ಅವರ ಭಾವಚಿತ್ರವನ್ನು ಮುದ್ರಿಸುವ ಪ್ರಸ್ತಾವನೆ ಇದೆಯೇ?

ಇ) ಸಾರ್ವಜನಿಕರಿಗೆ ವಿತರಿಸಲು ಉದ್ದೇಶಿತ ಹಸಿರು ಕಾರ್ಡುಗಳ ಸಂಖ್ಯೆ ಎಷ್ಟು?

ಈ) ಹಸಿರು ಕಾರ್ಡುಗಳನ್ನು ನೀಡಲು ಆಧಾರಗಳಾವುವು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಹೌದು.

ಆ) ಇಲ್ಲ.

ಇ) ಈಗ 30,77,582 ಹಸಿರು ಕಾರ್ಡುಗಳ ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ 37,026 ಹಸಿರು ಕಾರ್ಡುಗಳು ಅರೆಪಟ್ಟಣ ಪ್ರದೇಶಗಳಲ್ಲಿ ಅಸ್ತಿತ್ವದಲ್ಲಿರುವವು. ಪುನರ್ ಸಮೀಕ್ಷೆಯ ನಂತರ ಕೆಲವು ಹೆಚ್ಚುವರಿ ಕಾರ್ಡುಗಳನ್ನು ಗುರುತಿಸಿ ರದ್ದುಪಡಿಸಲಾಗುವುದು ಹಾಗೆಯೇ ಹೊಸ ಅರ್ಹ ಫಲಾನುಭವಿಗಳನ್ನು ಗುರುತಿಸಿ ಹೊಸ ಕಾರ್ಡುಗಳನ್ನು ನೀಡಲಾಗುವುದು.

ಈ) 20,000 ಜನಸಂಖ್ಯೆ ಮತ್ತು ಕಡಿಮೆ ಇರುವ ಗ್ರಾಮಾಂತರ ಪ್ರದೇಶ ಹಾಗೂ ಅರೇ ಪಟ್ಟಣ ಪ್ರದೇಶಗಳ ನಿವಾಸಿಗಳಾಗಿದ್ದಲ್ಲಿ ವಾರ್ಷಿಕವಾಗಿ ರೂ 6400-00 ಗಿಂತ ಕಡಿಮೆ ಆದಾಯವಿರುವವರು ಹಸಿರು ಕಾರ್ಡುಗಳನ್ನು ಪಡೆಯಲು ಅರ್ಹರು.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಉತ್ತರ ಬಹುಶಃ ಯಾರಿಗೂ ಕೂಡ ಹೋಗಿಲ್ಲ. ಏಕೆಂದರೆ ಈಗತಾನೆ ಒಬ್ಬರು ನನಗೆ ಇದನ್ನು ಕೊಟ್ಟರು. ನನ್ನ ಮೊದಲನೆಯ ಪ್ರಶ್ನೆ ಏನೆಂದರೆ. ಯಾವ ಕಾರಣಕ್ಕೆ ಈಗಿರತಕ್ಕ ಹಸಿರು ಕಾರ್ಡುಗಳನ್ನು ಬದಲಾವಣೆ ಮಾಡುತ್ತೀರಿ? ಏಕೆಂದರೆ ಈಗ ಹಸಿರು ಕಾರ್ಡುಗಳನ್ನು ಬದಲಾಯಿಸುವುದರಿಂದ ರಾಜ್ಯಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಮುದ್ರಣ ಖರ್ಚು ಬರುತ್ತದೆ. ಆದ್ದರಿಂದ ಇದನ್ನು ಏತಕ್ಕೆ ಬದಲಾವಣೆ ಮಾಡುತ್ತೀರೆಂಬುದನ್ನು ದಯವಿಟ್ಟು ಹೇಳಿ. ನೀವು ಮುದ್ರಣ ಮಾಡಿಸುವುದಾದರೆ ಡಾ.ಅಂಬೇಡ್ಕರ್‌ರವರ ಭಾವಚಿತ್ರವನ್ನು ಹಾಕುತ್ತೀರಾ ಎಂದು ನಾನು ಕೇಳಿರುವ ಪ್ರಶ್ನೆಗೆ "ಇಲ್ಲ" ಎಂದು ನೀವು ಹೇಳಿದ್ದೀರಿ. ಅಂದರೆ ಅಂಬೇಡ್ಕರ್‌ರವರ ಭಾವಚಿತ್ರವನ್ನು ಹಾಕುವುದಿಲ್ಲ. ಆದರೆ ನಿನ್ನೆ ವಿಧಾನ ಪರಿಷತ್ತಿನಲ್ಲಿ ಮತ್ತು ಪತ್ರಿಕೆಯಲ್ಲಿ ಹೇಳಿರುವ ಪ್ರಕಾರ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರ ಭಾವಚಿತ್ರವನ್ನು ಹಾಕಿ ಹಸಿರು ಕಾರ್ಡುಗಳನ್ನು ಕೊಡುತ್ತೇವೆಂದು ತಾವು ತಿಳಿಸಿದ್ದೀರಿ.

ತಮಗೇ ತಿಳಿದಿದೆ. ಶ್ರೀಮತಿ ಇಂದಿರಾಗಾಂಧಿಯವರು ಒಂದು ಪಕ್ಷಕ್ಕೆ ಸೀಮಿತವಾದವರು. ವಿವಾದಾತ್ಮಕವಾಗಿ ನಾಯಕಿ ಮತ್ತು ಕಾಂಟ್ರವರ್ಸಿಯಲ್ ಲೀಡರ್...

(ಗೊಂದಲ)

ಅಧ್ಯಕ್ಷರು ; ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು : ಆರ್ಡರ್.....ಆರ್ಡರ್..... ಆರ್ಡರ್

(ಎರಡು ಕಡೆಯ ಮಾನ್ಯ ಸದಸ್ಯರು ಮಾತನಾಡುತ್ತಿದ್ದುದರಿಂದ ಯಾರ ಮಾತು ಸ್ಪಷ್ಟವಾಗಿ ಕೇಳುತ್ತಿರಲಿಲ್ಲ)

ಅಧ್ಯಕ್ಷರು : ಯಾವತ್ತಿಗೂ ಒಂದು ಸಂಪ್ರದಾಯವೇನೆಂದರೆ ನಾನು ಇದರ ಬಗ್ಗೆ ಹಿಂದೆ ಹೇಳಿದ್ದೇನೆ. ಯಾವುದೇ ಪಕ್ಷದ ಮುಖಂಡರ ಬಗ್ಗೆ, ಅದರಲ್ಲೂ ಹಿಂದೆ ಪ್ರಧಾನಮಂತ್ರಿಗಳಾಗಿ ಇದ್ದವರ ಬಗ್ಗೆ, ಅದರಲ್ಲೂ ಗತಿಸಿದವರ ಬಗ್ಗೆ ಆದಷ್ಟು ನಾವು ವಿವಾದದಿಂದ ದೂರ ಇಡಬೇಕೆನ್ನುವುದನ್ನು ತಾವೆಲ್ಲರೂ ಒಪ್ಪುತ್ತೀರೆಂದು ತಿಳಿದುಕೊಂಡಿದ್ದೇನೆ. ಆದ್ದರಿಂದ ಅದನ್ನು ಮನಸ್ಸಿನಲ್ಲಿಟ್ಟುಕೊಂಡು ನಿಮ್ಮ ಪ್ರಶ್ನೆಯನ್ನು ಪುನರ್ ತೀರ್ಮಾನ ಮಾಡೋಣ.

(ಗೊಂದಲ)

Sri D.B. Chandre Gowda : Every member has a right to held his own view. Are we stopped from it?

Mr. Speaker : I depend upon good sense of individual members.

ಶ್ರೀ ವಾಟಾಳ್ ನಾಗರಾಜ್ : ಈ ವಿವಾದಕ್ಕೆ ಕಾರಣಕರ್ತರು ಯಾರೆಂದರೆ ಆಹಾರಮಂತ್ರಿಗಳು. ಮಾನ್ಯ ಇಂದಿರಾಗಾಂಧಿಯವರ ಬಗ್ಗೆ ನಮಗೆ ಬಹಳ ಗೌರವವಿದೆ. ಈ ವಿವಾದವನ್ನು ತಂದವರು ಆಹಾರ ಮಂತ್ರಿಗಳು.

(ಗೊಂದಲ)

ಅಧ್ಯಕ್ಷರು : ಆರ್ಡರ್.... ಆರ್ಡರ್..... ಆರ್ಡರ್

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ, ಶ್ರೀ ವಸಂತಸಾಲಿಯಾನ ತಾವು ಹೇಳಿ

ಶ್ರೀ ವಸಂತ ವಿ. ಸಾಲಿಯಾನ : ಜನತಾಸರ್ಕಾರ ಅಧಿಕಾರದಲ್ಲಿದ್ದಾಗ ಬೋರೆವೆಲ್ ವಿಚಾರದಲ್ಲಿ ಮಾನ್ಯ ನಜೀರ್‌ಸಾಬ್‌ರವರ ಹೆಸರನ್ನು ಇಟ್ಟರು. ಮತ್ತು ಜನತಾ ಸೀರೆ ವಿಚಾರ ಬಂದಾಗ ಜನತಾ ಸೀರೆ ಎಂದು ಹೆಸರಿಟ್ಟುಕೊಂಡರು. ಇದು ಹೇಗೆ? ವಿಚಾರಮಾಡಿದರು ಅವರ ಕಾಲದಲ್ಲಿ?

ಡಾ ಜೀವರಾಜ ಆಳ್ವ: ಒಂದು ಫೋಟೋ ಕೂಡ ಅಡ್ವರ್‌ಟೈಸ್‌ಮೆಂಟಿಗೆ ಹಾಕಲಿಲ್ಲ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ ಈಗ ವಿವಾದಕ್ಕೆ ಅವಕಾಶ ಕೊಟ್ಟಿರತಕ್ಕಂಥವರು ಸರ್ಕಾರದವರು. ಸತ್ತು ಸ್ವರ್ಗದಲ್ಲಿದ್ದಾರೆ. ಶ್ರೀಮತಿ ಇಂದಿರಾಗಾಂಧಿಯವರು ಶ್ರೀಮತಿ ಇಂದಿರಾಗಾಂಧಿಯವರನ್ನು ನರಕಕ್ಕೆ ಏತಕ್ಕೆ ಎಳೆಯುತ್ತೀರಿ. ವಿಶ್ವಮಾನವರಾಗಿದ್ದ ಕಾರ್ಲ್‌ಮಾರ್ಕ್ಸ್, ಲೆನಿನ್ ಅವರೆಲ್ಲರೂ ವಿಶ್ವಮಾನವರಾಗಿದ್ದರು. ಮಾಸ್ಕೋದಲ್ಲಿ ಅಂಥವರ ಸ್ಟಾಚುಗಳನ್ನು ಬೀದಿಗೆ ಕಿತ್ತು

ಎಸೆಯುತ್ತಿದ್ದಾರೆ. ಶ್ರೀಮತಿ ಇಂದಿರಾ ಗಾಂಧಿಯವರು ಹೆಸರನ್ನು ಎತ್ತಿ ವಿವಾದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ.

ಶ್ರೀಮತಿ ಆರ್.ಎಲ್. ಜಾಲಪ್ಪ : ಹತ್ತು ಕೇಜಿ ಅಕ್ಕಿಯನ್ನು ಒಂದು ಕಾರ್ಡಿಗೆ ಕೊಡಬೇಕೆಂದು ಇದ್ದುದನ್ನು ಈಗ ಮೂರು ಕೆ.ಜಿ. ಕೊಡುತ್ತೇವೆಂದರೆ ಯಾರನ್ನು ಬೈಯಬೇಕು. ಶ್ರೀಮತಿ ಇಂದಿರಾಗಾಂಧಿಯವರನ್ನು ಬೈಯಬೇಕೆಂದು ಹೇಳುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಆ ಕಡೆ ಮುಖ್ಯಮಂತ್ರಿ ಸಚೇತಕರು ರಾಯರೆಡ್ಡಿಯವರು ಮಾತನಾಡುತ್ತಾ ವಿವಾದಾಸ್ಪದ ಎಂಬ ಶಬ್ದವನ್ನು ಉಪಯೋಗ ಮಾಡಿದರು. ಡಾ. ಜೀವರಾಜ ಆಳ್ವಾರವರು ಗೌರವಾನ್ವಿತ ಸದಸ್ಯರು

ಡಾ. ಜೀವರಾಜ ಆಳ್ವ : ವಿವಾದಾಸ್ಪದ ವ್ಯಕ್ತಿ ಎಂದು ಪುನಃ ಹೇಳುತ್ತೇನೆ

ಶ್ರೀ ಎಂ.ವೀರಪ್ಪ ಮೊಯಿಲಿ ಆಯಾಯ ಕಾಲದಲ್ಲಿ ಅಂಥ ರಾಷ್ಟ್ರ ನಾಯಕರ ಬಗ್ಗೆ ವ್ಯಂಗ್ಯೋಕ್ತಿಗಳು ಬಂದಿರಬಹುದು. ತಾವು ಅಪ್ಪಣೆ ಕೊಡಿಸಿದ ಹಾಗೆ ಜೀಸಸ್ ಕ್ರಿಸ್ತ ಕೂಡ ಆ ಕಾಲದಲ್ಲಿ ವಿವಾದಾಸ್ಪದ ವ್ಯಕ್ತಿಯಾಗಿದ್ದ.

ಅಧ್ಯಕ್ಷರು : ಜೀಸಸ್ ಕ್ರಿಸ್ತನ ಬಗ್ಗೆ ಇತ್ತೀಚಿನ ದಿನಗಳಲ್ಲಿ ಅಮೆರಿಕಾದಲ್ಲಿ ಸ್ಯಾಟರಿಕ್ ಡ್ರಾಮ ಬಂದು ಬಿಜ್ಞಾಸೆ ಉಂಟಾಗಿದೆ. So, rising ourselves to that state ofmind - nobody is above controversy.

ಶ್ರೀ ಎಂ. ವೀರಪ್ಪ ಮೊಯಿಲಿ: ಆದರೆ ಇಂದಿರಾಗಾಂಧಿಯವರು ಗತಿಸಿ ಹೋಗಿದ್ದಾರೆ. ಅವರು ಪ್ರಾಣವನ್ನೇ ದೇಶಕ್ಕಾಗಿ ಅರ್ಪಣೆ ಮಾಡಿದ್ದಾರೆ. ಆದುದರಿಂದ ತಾವು ತಮ್ಮ ಪ್ರಶ್ನೆ ಕೇಳುವಾಗ ಇದು ಸರಿಯಲ್ಲವೆಂದು ಹೇಳಿ ಮಾನ್ಯ ಜಾಲಪ್ಪನವರು ಹೇಳಿದರು. ಆ ರೀತಿ ಏನಾದರೂ ವಾದ ಇಡಿ. ಆ ಹೆಸರನ್ನು ಹಾಕಿದ್ದು ಸದುದ್ದೇಶದಿಂದ ಎಂದು ಹೇಳಿದ್ದೇವೆ. ತಾವು ಅದನ್ನು ಒಪ್ಪದೆ ಇರಬಹುದು. ಅದರ ಬಗ್ಗೆ ಪ್ರಶ್ನೆ ಹಾಕಿ ಚರ್ಚೆ ಮಾಡುವ ಮತ್ತು ಅನವಶ್ಯಕವಾಗಿ ಅವರ ಹೆಸರನ್ನು ತಂದು ಇಲ್ಲಿ ಅಪಮಾನ ಮಾಡತಕ್ಕ ಪ್ರವೃತ್ತಿ ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ನಮಗೆ ಗೌರವ ಇದೆ. ಆದರೆ ನೀವು ಬೀದಿಗೆ ತರುತ್ತಿದ್ದೀರಿ. ಯಾವ ಎತ್ತರದಲ್ಲಿದ್ದರು ಅವರನ್ನು ನೀವು ಕಾರ್ಡಿಗೆ ಹಾಕಿ ಬೀದಿಗೆ ತರುತ್ತಿದ್ದೀರಿ. ಇದು ಸರಿಯಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಡಾ.ಜೀವರಾಜ ಆಳ್ವ ಅವರು ಉಪಯೋಗಿಸಿದ ಶಬ್ದ ಮತ್ತೊಬ್ಬರಿಗೆ ನೋವನ್ನುಂಟು ಮಾಡುತ್ತದೆ.

ಡಾ. ಜೀವರಾಜ ಆಳ್ವ : ವಿವಾದಾಸ್ಪದ ವ್ಯಕ್ತಿ ಎಂದು ರಾಯರೆಡ್ಡಿಯವರು ಹೇಳಿದ ತಕ್ಷಣ ಆಗೌರವ ಅಂದಿರಿ. ದೇಶದ ಲಕ್ಷೋಪಲಕ್ಷ ಜನ ಮೆಚ್ಚಿಕೊಂಡರೂ ವಿವಾದಾಸ್ಪದ ಇದ್ದೇ ಇದೆ. ಚರಿತ್ರೆಯನ್ನು ಯಾರೂ ಬದಲಾಯಿಸುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಹೌದು. ಹೊಸ ಚರಿತ್ರೆಯನ್ನು ಬರೆಯುವುದಕ್ಕಾಗುವುದಿಲ್ಲ.

ಡಾ. ಜೀವರಾಜ ಆಳ್ವ : ಭಾರತದ 80 ಕೋಟಿ ಜನರಲ್ಲಿ 20-25 ಕೋಟಿ ಜನರು ವಿರೋಧಾಭಿಪ್ರಾಯ ಹೊಂದಿದವರು ಇದ್ದಾರೆ. ಅವರಲ್ಲಿ ನಾನೂ ಒಬ್ಬ ಎಂದು ಹೇಳಿದೆ.

ಅಧ್ಯಕ್ಷರು : ವಿವಾದಾಸ್ಪದ ಪ್ರಶ್ನೆ ಬಂದಾಗ ಮಹಾತ್ಮ ಗಾಂಧಿಯವರನ್ನು ಕೊಂದವರು ಆ ಗುಂಪಿಗೆ ಸೇರುತ್ತಾರಲ್ಲವೆ?

ಶ್ರೀ ಬಸವರಾಜ ರಾಯರೆಡ್ಡಿ : ಹೆಗಡೆಯವರ ಕಾಲದಲ್ಲಿ ಹಸಿರು ಕಾರ್ಡನ್ನು ಜಾರಿಗೆ ತಂದರು. ತಂದಾಗ ಯಾವ ಭಾವಚಿತ್ರವನ್ನು ಪ್ರದರ್ಶಿಸಲಿಲ್ಲ. ಅದರಲ್ಲಿ ಜಯಪ್ರಕಾಶ್ ನಾರಾಯಣ್ ರವರ ಭಾವಚಿತ್ರವನ್ನು ಹಾಕಬಹುದಾಗಿತ್ತು. ಆದರೆ ಹಾಕಲಿಲ್ಲ. ನನಗೆ ಇಂದಿರಾಗಾಂಧಿಯವರ ಬಗ್ಗೆ ಅಪಾರವಾದ ಗೌರವ ಇದೆ. ಅದರ ಬಗ್ಗೆ ವಿವಾದ ಇಲ್ಲ.

ಒಬ್ಬ ಮಾನ್ಯ ಸದಸ್ಯರು : ಚುನಾವಣೆ ಭಾಷಣ ಮಾಡುತ್ತಿದ್ದೀರಾ ಹೇಗೆ?

ಶ್ರೀ ಬಸವರಾಜ ರಾಯರೆಡ್ಡಿ : ನಿಮ್ಮ ಪಕ್ಷದವರು ಕಾಂಗ್ರೆ ಪಕ್ಷಕ್ಕೆ ಸೇರಿದ್ದರಿಂದ ದಯವಿಟ್ಟು ಅವರ ಭಾಷಣಚಿತ್ರವನ್ನು ಹಾಕಬೇಡಿ. ಡಾ.ಅಂಬೇಡ್ಕರ್ ರವರ ಶತಮಾನೋತ್ಸವ ನಡೆಯುತ್ತಿರುವುದರಿಂದ ಅವರ ಭಾವಚಿತ್ರವನ್ನು ಹಾಕಿದರೆ ಒಳ್ಳೆಯದು

ಶ್ರೀ ವಾಟಾಳ್ ನಾಗರಾಜ್ : ಯಾರ ಭಾವಚಿತ್ರಗಳು ಬೇಡ. ಏಕೆಂದರೆ ಒಬ್ಬರಿಗೊಬ್ಬರಿಗೆ ವಾದವಿವಾದ ಉಂಟಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರ ಸಲಹೆ ಒಳ್ಳೆಯದು ಡಾ. ಅಂಬೇಡ್ಕರ್ ರವರ ಭಾವಚಿತ್ರವನ್ನು ಹಾಕುವುದು ಒಳ್ಳೆಯದೆಂದು ಹೇಳಿದ್ದಾರೆ. ಇದು ಅವರದ್ದೇ ಪ್ರಶ್ನೆ. ಅವರೇ ಸಲಹೆಯನ್ನು ಕೊಟ್ಟಿದ್ದಾರೆ. ಏತಕ್ಕೆ ಸಲಹೆ ಕೊಟ್ಟಿದ್ದಾರೆಂದರೆ ಅವರಿಗೆ ಡಾ.ಅಂಬೇಡ್ಕರವರ ಬಗ್ಗೆ ಅಪಾರವಾದ ಗೌರವ ಇದೆ. ಅವರು ಒಂದು ಶತಮಾನಕಾಲ ಹೋರಾಟ ಮಾಡಿರತಕ್ಕವರು. ಸಮಾಜದಲ್ಲಿ ತುಳಿತಕ್ಕೆ ಸಿಕ್ಕಿದ ವರ್ಗದವರನ್ನು ಮೇಲಕ್ಕೆ ತರುವುದಕ್ಕೆ ಬಹಳವಾಗಿ ಹೋರಾಟ ಮಾಡಿದ್ದಾರೆ. ಆದರೆ ಡಾ. ಅಂಬೇಡ್ಕರ್‌ರವರ ವಿಚಾರಧಾರೆಯನ್ನು ಒಪ್ಪದೆ ಇರತಕ್ಕ ಜನರು ಇದ್ದರು ಎಂದು ಸ್ವತಃ ಅಂಬೇಡ್ಕರ್‌ರವರೇ ಬರೆದಿದ್ದಾರೆ. ಅವರ ಬಗ್ಗೆ ಆ ಕಾಲದಲ್ಲಿಯೂ ವಿರೋಧಾಭಿಪ್ರಾಯವುಳ್ಳವರಿದ್ದರು. ಕೇಂದ್ರ ಸರ್ಕಾರದಲ್ಲಿ ಏತಕ್ಕೆ ರಿಸೈನ್ ಮಾಡಿದರು ಎಂಬುದು ಇದೆ. ಕೆಲವು ಕಾಲದಲ್ಲಿ ಕೆಲವರ ಬಗ್ಗೆ ವಿವಾದಾಸ್ಪದ ಇರಬಹುದು. ವಿವಾದಾಸ್ಪದಕ್ಕೆ ಒಳಗಾದ ತಕ್ಷಣ ಯಾವುದೇ ವ್ಯಕ್ತಿಗಳ ವ್ಯಕ್ತಿತ್ವ ಮರೆಮಾಚಿ ಹೋಗುವುದಿಲ್ಲ. ಆ ವ್ಯಕ್ತಿತ್ವವನ್ನು ಮೆಚ್ಚಿ ಕೊಂಡರೆ ಜನಸಾಮಾನ್ಯರಿಗೆ ಅನುಕೂಲವಾಗುತ್ತದೆಂದರೆ ಆ ವ್ಯಕ್ತಿತ್ವವನ್ನು ಮೂಲಭೂತವಾಗಿ ಒಪ್ಪಬೇಕಾಗುತ್ತದೆ.

ಡಾಕ್ಟರ್ ಅಂಬೇಡ್ಕರ್ ಅವರ ಹೆಸರನ್ನು ಹಾಕಬೇಕು. ತಾವೂ ಕೂಡ ಉಪಪ್ರಶ್ನೆ ಕೇಳಿದ್ದೀರಿ. ಅಂಬೇಡ್ಕರ್ ಅವರೂ ಕೂಡ ವಿವಾದಕ್ಕೆ ಒಳಗಾಗಿದ್ದರು. ಅದೇ ರೀತಿ ಶ್ರೀಮತಿ ಇಂದಿರಾಗಾಂಧೀಜಿಯವರೂ ವಿವಾದಕ್ಕೆ ಒಳಗಾಗಿರತಕ್ಕ ವ್ಯಕ್ತಿ ಎಂಬ ಭಾವನೆ ನಾವು ಇಟ್ಟುಕೊಳ್ಳುವುದಾದರೆ ಒಂದು ವಿಚಾರ ಮರೆಯಬಾರದು. ಹಲವಾರು ವರ್ಷಗಳ ಕಾಲದವರೆಗೆ ರಾಷ್ಟ್ರದ ಸಂಪೂರ್ಣ ಜವಾಬ್ದಾರಿ ಹೊತ್ತು ಅದರ ಅಧಿಕಾರ ಚುಕ್ಕಾಣಿ ಹಿಡಿದು ಪ್ರಧಾನ ಮಂತ್ರಿಯಾಗಿ

ಜವಾಬ್ದಾರಿ ನಿರ್ವಹಣೆ ಮಾಡಿ ರಾಷ್ಟ್ರಕ್ಕಾಗಿ ಜೀವನಾರ್ಪಣೆ ಮಾಡಿರತಕ್ಕ ಶ್ರೀಮತಿ ಇಂದಿರಾಗಾಂಧಿಯವರು, ಅವರ ಹೆಸರಿನಲ್ಲಿ ಭಾವಚಿತ್ರ ಇಟ್ಟರೆ ಅಂಬೇಡ್ಕರ್ ಹೆಸರಿಟ್ಟಿದ್ದು ಎಷ್ಟು ಯೋಗ್ಯವೋ ಅಷ್ಟೇ ಶ್ರೀಮತಿ ಇಂದಿರಾಗಾಂಧೀಯವರು. ಅವರ ಹೆಸರಿನಲ್ಲಿ ಭಾವಚಿತ್ರ ಇಟ್ಟರೆ ಅಂಬೇಡ್ಕರ್ ಹೆಸರಿಟ್ಟಿದ್ದು ಎಷ್ಟು ಯೋಗ್ಯವೋ ಅಷ್ಟೇ ಶ್ರೀಮತಿ ಇಂದಿರಾಗಾಂಧಿಯವರ ಹೆಸರಿಟ್ಟಿದ್ದು ಯೋಗ್ಯವಾಗುತ್ತದೆ. ನೀವು ಆ ಹೆಸರು ಹೇಳಿದ ಮೇಲೆ ಈ ಹೆಸರನ್ನು ಕೂಡ ಹೇಳುವುದು ತಪ್ಪಾಗಲಾರದು ಎಂಬ ಮೂಲ ವಿಚಾರತನ ನಿಮ್ಮಲ್ಲಿದ್ದರೆ ಬಹಳ ಒಳ್ಳೆಯದು. ಅದು ಎಲ್ಲಾರಿಗೂ ಕೂಡ ಒಳ್ಳೆಯದು. ಈ ಹೆಸರು ಹಾಕಿದ್ದು ಯಾವುದೂ ತಪ್ಪಿಲ್ಲ. ಇವತ್ತು ನಾವು ಬರೀ ಇಂದಿರಾಗಾಂಧಿಯವರ ಹೆಸರು ಎಂದು ಸೀಮಿತಗೊಳಿಸಿ ಮಾತನಾಡುತ್ತಿಲ್ಲ. ಹಿಂದೆ ದೆಹಲಿಯಲ್ಲಿ ಆಸ್ಪತ್ರೆ ಒಂದಿತ್ತು.ಅದಕ್ಕೆ ಲೋಹಿಯಾ ಆಸ್ಪತ್ರೆ ಎಂದು ಹೆಸರು ಬಂತು. ಜಯಪ್ರಕಾಶ್ ನಾರಾಯಣ್ ಎಂಬ ಹೆಸರು ಬಂದಿದೆ. ಸ್ವಾಮಿ, ನಾನು ಬಂದು ಹೇಳುತ್ತೇನೆ. ಇದೆಲ್ಲಾ ಏತಕ್ಕೆ ಎಂದರೆ ಒಬ್ಬ ದೊಡ್ಡ ವ್ಯಕ್ತಿಗೆ ಕೊಡುವ ಗೌರವ ಎಂಬ ದೃಷ್ಟಿಯಿಂದ ಇಂದಿರಾಗಾಂಧಿಯವರ ಹೆಸರಿದೆ. ಆಮೇಲೆ ಬೇರೆ ಬೇರೆ ದೊಡ್ಡ ದೊಡ್ಡ ಮಹಾನ್ ವ್ಯಕ್ತಿಗಳ ಹೆಸರನ್ನು ನಾವು ಇಟ್ಟುಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಸ್ಮಾರಕಗಳಿಗೆ ಇಡಿ. ಕಾರ್ಡ್‌ಗಳಿಗೆ ಬೇಡ. ಫೋಟೊ ಕಾರ್ಡ್‌ಗಳಿಗೆ ಆ ಹೆಸರಿಟ್ಟು ಅವರ ಘನತೆ ಕಡಿಮೆ ಮಾಡಬಾರದು.

ಶ್ರೀ ಎಸ್. ಬಂಗಾರಪ್ಪ : ಒಂದು ನಿಮಿಷ ವಾಟಾಳರೇ ತಾವು ಹೇಳುವುದು ಸ್ಮಾರಕಗಳು ಅದು ಬೇರೆ. 20 ಅಂಶದ ಆರ್ಥಿಕ ಕಾರ್ಯಕ್ರಮವನ್ನು ರಾಷ್ಟ್ರಕ್ಕೆ ಕೊಟ್ಟಿರುವ ಧೀಮಂತರ ಮಹಿಳೆ ಪ್ರಧಾನ ಮಂತ್ರಿ ಆಗಿದ್ದಂಥವರು ಶ್ರೀಮತಿ ಇಂದಿರಾಗಾಂಧೀಜಿಯವರು. ಹಸಿರು ಕಾರ್ಡ್ ಕೊಡತಕ್ಕದ್ದು ಅದೇ ಕಾರ್ಯಕ್ರಮ ಹರಿಸು ಕಾರ್ಡುಗಳ ಮತ್ತೊಂದು ಕಾರ್ಡುಗಳು ಯಾವುದೋ ಒಂದು ಬಣ್ಣ. ತಾವು ಹಸಿರು ಕಾರ್ಡ್ ಎಂದು ಇಟ್ಟಿದ್ದೀರಿ. ಯಾವುದೋ ಬಣ್ಣ. ಬಣ್ಣ ಬಂದಾಗ ನಾವು ಸೆಲೆಕ್ಟ್ ಮಾಡಿದ್ದೇವೆ. ಯಾವ ಬಣ್ಣ ಇರಬೇಕು. ಎಂದು ಯಾರ ಹೆಸರು ಇಡೋಣ ಎಂದಾಗ ಇಂದಿರಾಗಾಂಧಿಯವರ ಹೆಸರು ಇಟ್ಟಿದ್ದೇವೆ. ಲೋಹಿಯಾ ಅವರ ಹೆಸರಿಡುವುದೂ ತಪ್ಪಲ್ಲ. ಜಯಪ್ರಕಾಶ ನಾರಾಯಣ್ ಅವರ ಹೆಸರಿಡುವುದೂ ತಪ್ಪಲ್ಲ. ಮಾನ್ಯ ಸಭಾಧ್ಯಕ್ಷರೆ ತಮ್ಮ ಅನುಮತಿ ಪಡೆದು ಇಷ್ಟು ವಿಚಾರ ಇಟ್ಟಿದ್ದೇನೆ. ಇವೆಲ್ಲಾ ವಿವಾದಕ್ಕೆ ಒಳಗಾಗಿರುವ ವಿಚಾರ ಎಂದು ಮಾರ್ಪಾಡು ಮಾಡಿದರೆ ವಾದಕ್ಕೆ ಅದೇ ಸಾಕುಗುತ್ತದೆ. ಹಾಗೆ ಅಲ್ಲ ನಮ್ಮನ್ನು ಅಗಲಿ ಹೋಗಿರುವ ಮಹಾನ್ ವ್ಯಕ್ತಿಗಳ ಬಗ್ಗೆ ಗೌರವ ಕೊಡುವುದು ನೆನಪಿಗೋಸ್ಕರ ಪಠ್ಯಪುಸ್ತಕಗಳಲ್ಲಿ ಮಹಾನ್ ವ್ಯಕ್ತಿಗಳ ಹೆಸರು ಅವರ ಚಿತ್ರ ಎಲ್ಲಾ ಬರೆಯುತ್ತೇವೆ ನಾವೆಲ್ಲಾ ಓದಬೇಕಾದರೆ. ಹಿಂದಿನ ಕಾಲದ ರಾಜ ಮಹಾರಾಜರದು ಇತ್ತು ಅವರ ಕುಟುಂಬದಲ್ಲಿ ಎಷ್ಟು ಜನರಿದ್ದರು. ಫೋಟೊಗಳು ಎಲ್ಲಾ ಇತ್ತು ಹಾಗೆಯೇ ಇಂದಿರಾಜಿಯವರು. ಲೋಹಿಯಾ ಅವರು, ಜಯಪ್ರಕಾಶ್ ನಾರಾಯಣ್ ಅವರು ಕಾರ್ಲ್‌ಮಾರ್ಕ್ಸ್ ಅವರು, ಲೆನಿನ್ ಅಥವಾ ಪೂಜ್ಯ ಮಹಾತ್ಮ ಗಾಂಧೀಜಿಯವರು ಇವರುಗಳ ವಿಚಾರಗಳ ಚಿಂತನೆಗಳು, ಒಂದೊಂದು ಸಾರಿ ನೆನಪು ಬರುತ್ತವೆ. ಇವರುಗಳು ರಾಷ್ಟ್ರಕ್ಕೆ ಯಾವ ಕೊಡುಗೆ ಕೊಟ್ಟಿದ್ದಾರೆ ಅದರ ಹಿನ್ನೆಲೆಯಲ್ಲಿ

ಚಿಂತನೆಗಳು ಒಬ್ಬ ವ್ಯಕ್ತಿಯಲ್ಲಿ ಮರುಕಳಿಸುತ್ತವೆ. ಇದರಲ್ಲಿ ಸ್ಪೆಷಲ್ ಏನೂ ಇಲ್ಲ. ಇದನ್ನು ತಾವು ಒಪ್ಪುತ್ತೀರಿ ಎಂದು ನಾನು ಭಾವಿಸಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಭಾಧ್ಯಕ್ಷರೆ, ನನ್ನದೊಂದು ಪೂರಕ ಪ್ರಶ್ನೆ ರಾಷ್ಟ್ರದ ಗೌರವ ಲಾಂಛನಗಳಾದ ರಾಷ್ಟ್ರಧ್ವಜ, ರಾಷ್ಟ್ರೀಯ ನಾಯಕರು ಇಂಥದ್ದನ್ನು ಒಂದು ರಾಜ್ಯ ಸರ್ಕಾರದ ಕಾರ್ಯಕ್ರಮಕ್ಕೆ ಬಳಸತಕ್ಕದ್ದು ಜನತಂತ್ರದ ವ್ಯವಸ್ಥೆಯಲ್ಲಿ ಸಾಧುವೆ? ಸಿಂಧುವೆ? ಈ ಪ್ರಶ್ನೆಯನ್ನು ನಾನು ತಮಗೆ ಕೇಳುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ : ಬೆಳ್ಳಿ ರೂಪಾಯಿ ಮಾಡುತ್ತೀರಿ. ಚಿನ್ನದ ರೂಪಾಯಿ ಮಾಡುತ್ತೀರಿ. ಅದರ ಮೇಲೆಲ್ಲಾ ಹಾಕುವುದನ್ನು ನಾವು ಸ್ವಾಗತಿಸುತ್ತೇವೆ. ಕಾರ್ಡುಗಳ ಮೇಲೆ ಏತಕ್ಕೆ ಹಾಕುತ್ತೀರಿ?

ಡಾ. ಜೀವರಾಜ ಆಳ್ವ: ತಮಗೆ ಗೊತ್ತಿರುವ ಹಾಗೆ ಜವಾಹರಲಾಲ್ ನೆಹರು ತಮ್ಮ ಹೆಸರನ್ನು ಯಾವುದೇ ವಿಚಾರದಲ್ಲಿ ಬಳಸಬಾರದು ಎಂದು ತೀಕ್ಷಣವಾಗಿ ತಿಳಿಸಿದ್ದರು.

ಶ್ರೀ ಬಸವರಾಜ ರಾಯರೆಡ್ಡಿ : ಮಹಾತ್ಮ ಗಾಂಧಿ ವಿವಾದದ ವ್ಯಕ್ತಿ ಅಲ್ಲ. ಮುಖ್ಯಮಂತ್ರಿಗಳ ಪ್ರಕಾರ ಡಾಕ್ಟರ್ ಅಂಬೇಡ್ಕರ್ ಅವರು ಕಾಂಟ್ರವರ್ಸಿ ಲೀಡರ್ ಆದರೆ.....

ಶ್ರೀ ಡಿ.ಬಿ. ಚಂದ್ರೇಗೌಡ : ಸರ್ಕಾರ ಈ ತೀರ್ಮಾನ ತೆಗೆದುಕೊಂಡಿದೆಯೇ?

ಅಧ್ಯಕ್ಷರು : ಪ್ರಶ್ನೋತ್ತರ ಕಾಲದಲ್ಲಿ ಪ್ರಶ್ನೆ ಕೇಳಿ ನೀವು.

ಶ್ರೀ ಬಸವರಾಜ ರಾಯರೆಡ್ಡಿ : ಪ್ರಶ್ನೆ ಕೇಳಿದ್ದೇನೆ.

ಅಧ್ಯಕ್ಷರು : ಏನು ಪ್ರಶ್ನೆ.

ಶ್ರೀ ಬಸವರಾಜ ರಾಯರೆಡ್ಡಿ : ನಾನು ಕೇಳಿದ್ದಿಷ್ಟೆ. ಅಂಬೇಡ್ಕರ್ ಚಿತ್ರ ಹಾಕುತ್ತೀರಾ ಎಂದಾಗ ಅವರೂ ಕೂಡ ವಿವಾದಾತ್ಮಕ ವ್ಯಕ್ತಿ ಎಂದು ಹೇಳಿದರು. ಅಂಬೇಡ್ಕರ್ ವಿವಾದಾತ್ಮಕ ಆದರೆ .... ಅಧ್ಯಕ್ಷರೇ, ಕೊನೆಯದು ಎಷ್ಟು ಜನರಿಗೆ ಹೆಚ್ಚು ಕಾರ್ಡುಗಳನ್ನು ಕೊಡುತ್ತೀರಿ ಎಂದು ಕೇಳಿದ್ದೇನೆ. ಆದರೆ ಉತ್ತರದಲ್ಲಿ ಎಷ್ಟು ಜನರಿಗೆ ಕೊಡುತ್ತಾರೆ ಎಂದು ಹೇಳಲಿಲ್ಲ. ಈಗಾಗಲೇ 31,14,508 ಜನರಿಗೆ ಮಾತ್ರ ಕಾರ್ಡ್ ಕೊಟ್ಟಿದ್ದೇವೆ. ಎಂದು ಹೇಳಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ.

ಅಧ್ಯಕ್ಷರು : ಮೂಲ ಪ್ರಶ್ನೆಕಾರರು ಅವರು ಅವರು ನಿಂತೇ ಇದ್ದಾರೆ.

12.10 ಪಿ.ಎಂ.

ಶ್ರೀ ಡಿ.ಬಿ. ಚಂದ್ರೇಗೌಡ : ನನ್ನ ಪ್ರಶ್ನೆಗೆ ಉತ್ತರ ಬರಬೇಕೋ ಬೇಡವೋ?

ಶ್ರೀ ಬಸವರಾಜ ರಾಯರೆಡ್ಡಿ : Sir.

Mr. Speaker : We are going away from the main question. ಪುನಃ ಕರೆಯುತ್ತೇನೆ ನಿಮಗೆ.

ಶ್ರೀ ಡಿ.ಬಿ. ಚಂದ್ರೇಗೌಡ : ರಾಷ್ಟ್ರೀಯ ಗೌರವದ ಲಾಂಛನಗಳಾದ ರಾಷ್ಟ್ರಧ್ವಜ ಮತ್ತು ರಾಷ್ಟ್ರೀಯ ಮುಖಂಡರುಗಳನ್ನು ಒಂದು ರಾಜ್ಯದ ಕಾರ್ಯಕ್ರಮಗಳಲ್ಲಿ ಬಳಸತಕ್ಕದ್ದು ಸಾಧುವೇ ಮತ್ತು ಸಂಭವನೀಯವೇ? ಇಂತಹ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆಯೇ?

ಶ್ರೀ ಆರ್.ಎಲ್. ಜಾಲಪ್ಪ : ಇದು ಹೊಸ ಕಾರ್ಯಕ್ರಮವೇನಲ್ಲ. ಹೊಸಕಾರ್ಯಕ್ರಮವಾದರೆ ತಾವು ಯೋಚನೆ ಮಾಡಬಹುದು. ಹಸಿರು ಕಾರ್ಡ್ ಕಾರ್ಯಕ್ರಮ ಹಿಂದಿನಿಂದ ಬಂದಿದೆ.

ಶ್ರೀ ಎಸ್. ಬಂಗಾರಪ್ಪ : ಕೆಲವು ಸಾರಿ ಹೆಸರು ಬದಲಾವಣೆ ಮಾಡಿದರೆ ಪೇಪರ್‌ನಲ್ಲಿ ಹಾಕಿಸಿಕೊಳ್ಳುತ್ತಾರೆ. ಹೊಸ ಕಾರ್ಯಕ್ರಮ ಅಲ್ಲ ಎಂದಿದ್ದಕ್ಕೆ ನಾನು ಇದನ್ನು ಹೇಳಿದೆ. ಅಷ್ಟೇ ರಾಷ್ಟ್ರೀಯ ಲಾಂಛನವಾಗಲೀ ರಾಷ್ಟ್ರೀಯ ನಾಯಕರನ್ನಾಗಲೀ ಇವತ್ತು ರಾಜ್ಯ ಮಟ್ಟದಲ್ಲಿ ಉಪಯೋಗ ಮಾಡತಕ್ಕದ್ದು ಪ್ರಶ್ನೆ. ಹೆಚ್ಚಾಗಿ ನಾವು ಆಸ್ಪತ್ರೆಗಳು ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕ ಆಸ್ಪತ್ರೆಗಳಿಗೆ ಹೆಸರನ್ನು ಇಡುವಾಗ ಇಂದಿರಾಗಾಂಧಿ ಆಸ್ಪತ್ರೆ, ಲೋಹಿಯಾ ಆಸ್ಪತ್ರೆ ಅಥವಾ ಅಂಬೇಡ್ಕರ್ ಆಸ್ಪತ್ರೆ ಎಂದು ಹೆಸರು ಇಡುತ್ತೇವೆ. ಅದರ ಅರ್ಥ ನಾವು ಅವರನ್ನು ಕೆಳಮಟ್ಟಕ್ಕೆ ತರುತ್ತೇವೆಂದು ಅಲ್ಲ. ನಾವು ಅವರನ್ನು ನೆನಪು ಮಾಡುವ ಮಟ್ಟದಲ್ಲಿ ಜನತೆಯ ಗಮನಕ್ಕೆ ತರತಕ್ಕ ಒಂದು ವಿಧಿವಿಧಾನ ಬಿಟ್ಟರೆ ಅದು ದುರುಪಯೋಗ ಅಲ್ಲ ಸಲ್ಲಿಸತಕ್ಕ ಗೌರವ ಎಲ್ಲಾ ಮಟ್ಟದಲ್ಲೂ ಇರಬೇಕು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮುಖ್ಯಮಂತ್ರಿಗಳು ಹೇಳುತ್ತಾರೆ. ರಾಷ್ಟ್ರಧ್ವಜ ಹಾಗೂ ಶ್ರೀಮತಿ ಇಂದಿರಾಗಾಂಧಿಯವರ ಹೆಸರನ್ನು ಹಾಕಿ ರಾಜ್ಯದ ಕಾರ್ಯಕ್ರಮ ಹಾಕಿರುವ ತೀರ್ಮಾನವನ್ನು ತೆಗೆದುಕೊಂಡಿರುವುದರಿಂದ.....

(ಗೊಂದಲ)

ಹೌದು.... ತ್ರಿವರ್ಣಧ್ವಜ ಹಾಕಿದ್ದೀರಿ. ಅದು ರಾಷ್ಟ್ರಧ್ವಜ..... ನಿಮ್ಮ ಕಾಂಗ್ರೆಸ್ಸಿನ ಬಾವುಟ ಅದು.

Mr. Speaker : We are not discussing the main question.

ಶ್ರೀ ಡಿ.ಬಿ. ಚಂದ್ರೇಗೌಡ : ಸರ್ಕಾರದ ಈ ನಿಲುವಿಗೆ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ನಾವು ಇದನ್ನು ವಿರೋಧ ಮಾಡುತ್ತೇವೆ. ಇದು ಸರ್ಕಾರದ ಕೆಲಸ. ಒಂದು ರಾಜಕೀಯ ಪಕ್ಷದ ಕೆಲಸ ಅಲ್ಲ.

ಶ್ರೀ ಎಸ್. ಬಂಗಾರಪ್ಪ : ಅವರು ವಿಷಯವನ್ನು ಪೂರ್ತಿ ಕೇಳಬೇಕು. ಇವತ್ತು ಇರತಕ್ಕದ್ದು ಟ್ರೈಕಲರ್ ಏನು ಇದೆ. ತಮಗೆ ಗೊತ್ತಿರುವ ಹಾಗೆ ಇದು ಸರ್ಕಾರದ ಕಾರ್ಯಕ್ರಮ. ಪಕ್ಷದ ಧ್ವಜ ತಂದು ಹಾಕಿಕೊಂಡಿಲ್ಲ. ಶ್ರೀಮತಿ ಇಂದಿರಾಗಾಂಧಿಯವರೂ ಪ್ರಧಾನಿಗಳಾಗಿದ್ದರು. ಟ್ರೈಕಲರ್ ಎಂದರೆ ಪಕ್ಷದ್ದು ಅಲ್ಲ. ಇದನ್ನು ಅರ್ಥಮಾಡಿಕೊಳ್ಳಬೇಕು. ರಾಷ್ಟ್ರಧ್ವಜ ಕೂಡ ಅದೇ ಟ್ರೈಕಲ್‌ರ್‌ನಲ್ಲಿ ಇದೆ. ಮಾತ್ರ ಚಕ್ರ ಇರತಕ್ಕದ್ದು, ಚಕ್ರ ಇಲ್ಲದೇ ಇರತಕ್ಕದ್ದು ಪ್ರಶ್ನೆ ಇದೆ. ಅದಕ್ಕೆ ಅನೇಕ ವರ್ಷಗಳಿಂದ ಬಂದಿರತಕ್ಕ ವಿಷಯ. ಇಲ್ಲಿ ವಿಶೇಷವಾಗಿ ತಪ್ಪು ಗ್ರಹಿಕೆಗೆ ಅವಕಾಶ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಇದು ಸರ್ಕಾರದ ತೀರ್ಮಾನವೇ?

ಶ್ರೀ ಎಸ್. ಬಂಗಾರಪ್ಪ : ಸರ್ಕಾರದ ತೀರ್ಮಾನ ಆಲ್ಲದಿದ್ದರೆ ಕಾರ್ಡ ಪ್ರಿಂಟ್ ಆಗುತ್ತದೆಯೇ?

ಶ್ರೀ ಡಿ.ಬಿ. ಚಂದ್ರೇಗೌಡ : ಇದನ್ನು ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಸರ್ಕಾರದ ಕಾರ್ಯಕ್ರಮದಲ್ಲಿ ಈ ರೀತಿ ದುರುಪಯೋಗ ಆಗತಕ್ಕದ್ದನ್ನು ನಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಇಂದಿರಾಗಾಂಧಿಯವರ ಬಗ್ಗೆ ನಮಗೆ ಗೌರವ ಇದೆ. ಈ ರೀತಿಯ ಗೌರವಾನ್ವಿತ ವ್ಯಕ್ತಿಗಳನ್ನು ಈ ಸರ್ಕಾರ ತನ್ನ ಕಾರ್ಯಕ್ರಮದಲ್ಲಿ ಹಾಕುವುದು ಸರ್ಕಾರದ ದುರುಪಯೋಗವಾಗುತ್ತದೆ. ಇಂತಹ ದುರುಪಯೋಗವನ್ನು ಪ್ರತಿಭಟನೆ ಮಾಡಿ ನಾವು ಈ ಸದನದಿಂದ ಹೊರಗಡೆ ಹೋಗುತ್ತಿದ್ದೇವೆ.

(ಈ ಸಮಯದಲ್ಲಿ ವಿರೋಧ ಪಕ್ಷದ ನಾಯಕರು ಹಾಗೂ ಜನತಾ ದಳ ಪಕ್ಷದ ಸದಸ್ಯರು ಸಭಾತ್ಯಗ ಮಾಡಿದರು)

ಶ್ರೀ ಎಸ್. ಬಂಗಾರಪ್ಪ : ಹೊರಗಡೆ ಹೋಗಿ ಬನ್ನಿ ಮತ್ತೆ.

ಶ್ರೀ ವಾಟಾಳ್ ನಾಗರಾಜ್ : ಶ್ರೀಮತಿ ಇಂದಿರಾಗಾಂಧಿಯವರ ಬಗ್ಗೆ ನಮಗೆ ಅಪಾರ ಗೌರವ ಇದೆ. ಬೀದಿ ಬೀದಿ. ರಸ್ತೆ ರಸ್ತೆಯಲ್ಲಿ ಬಿದ್ದ ಒದ್ದಾಡುವ ಕಾರ್ಡುಗಳಲ್ಲಿ ಇವರ ಒಂದು ಸ್ವಾರ್ಥಕ್ಕೋಸ್ಕರ, ರಾಜಕೀಯ ಬಂಡವಾಳಕ್ಕೋಸ್ಕರ ಇದನ್ನು ಉಪಯೋಗಿಸುವುದು ಸರಿಯಲ್ಲವೆಂದು ಹೇಳುತ್ತೇನೆ. ನಾವೂ ಕೂಡ ಇದನ್ನು ಪ್ರತಿಭಟಿಸುತ್ತೇವೆ. ಇದರಿಂದ ನಿಮಗೆ ಒಳ್ಳೆಯ ಹೆಸರು ಬರುವುದಿಲ್ಲ. ಈ ವಿಚಾರದ ಬಗ್ಗೆ ತಮ್ಮ ಸಚಿವ ಸಂಪುಟದ ಸಭೆಯಲ್ಲೂ ಕೂಡ ಒಮ್ಮತದ ಅಭಿಪ್ರಾಯ ಬಂದಿರಲಾರದು ಎಂದು ನಾನು ಅಂದುಕೊಂಡಿದ್ದೇನೆ ಇದು ಸರಿಯಲ್ಲ. ಶ್ರೀಮತಿ ಇಂದಿರಾಗಾಂಧಿಯವರನ್ನು ಈ ಮಟ್ಟಕ್ಕೆ ಉಪಯೋಗಿಸಿಕೊಳ್ಳುವುದು ಸರಿಯಲ್ಲ. ಅವರ ಹೆಸರಿನಲ್ಲೇ ಅಧಿಕಾರಕ್ಕೆ ಬಂದ ನೀವು ಶ್ರೀಮತಿ ಇಂದಿರಾಗಾಂಧಿಯವರನ್ನು ಇಷ್ಟು ಚೀಪ್ ಆಗಿ ಈ ಮಟ್ಟಕ್ಕೆ ಇಳಿಸುವುದು ಸರಿಯಲ್ಲ ನಿಮಗೆ.

ಅಧ್ಯಕ್ಷರು: ಪ್ರೊಫೆಸರ್ ನಂಜುಂಡಸ್ವಾಮಿ.....

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ ಒಂದು ವಿಷಯವನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ಮತ್ತು ಸದನದ ಗಮನಕ್ಕೆ ತಮ್ಮ ಅಪ್ಪಣೆ ಪಡೆದು ಹೇಳುತ್ತಿದ್ದೇನೆ

ಶ್ರೀಮತಿ ಇಂದಿರಾಗಾಂಧಿಯವರ ಮೇಲೆ ಗೌರವವನ್ನು ಇಟ್ಟು ಅದೊಂದು ಉದ್ದೇಶದಿಂದ ಮಾಡಿದ್ದೇವೆ ಎರಡನೆಯ ವಿಚಾರ ಅದರೊಳಗೆ ಚಕ್ರನೂ ಇಲ್ಲ ಚರಕವೂ ಇಲ್ಲ. ಯಾವುದನ್ನು ಕೂಡ ಅದರೊಳಗಡೆ ಹಾಕಿಲ್ಲ. ತ್ರಿವರ್ಣಧ್ವಜ ಬಂದಿದ್ದರೆ ಅದು ರಾಷ್ಟ್ರಪ್ರೇಮ ರಾಷ್ಟ್ರಧ್ವಜದ ಕಾರಣದಿಂದ ನಾವು ಚಿಂತನೆ ಮಾಡಿರತಕ್ಕದ್ದನ್ನು ಬಿಟ್ಟರೆ ಇನ್ನಾವುದೂ ಇಲ್ಲ. ಪಕ್ಷದ ವಿಚಾರ ಎಳ್ಳಷ್ಟೂ ಇಲ್ಲ

ಅಧ್ಯಕ್ಷರು : ನಾನು ಆಗಲೇ ಪ್ರೊಫೆಸರ್ ನಂಜುಂಡಸ್ವಾಮಿಯವರ ಹೆಸರು ಕರೆದಿದ್ದೇನೆ.

ಪ್ರೊ ಎಂ.ಡಿ ನಂಜುಂಡಸ್ವಾಮಿ : ಸನ್ಮಾನ್ಯ ಅಧ್ಯಕ್ಷರೆ ಹೊರಗಡೆ ಹೋಗಿದ್ದ ಸದಸ್ಯರುಗಳು ಒಳಗಡೆ ಬರುತ್ತಿದ್ದಾರೆ.ಎಲ್ಲರೂ ಇದ್ದಾಗ ನಾನು ಮಾತನಾಡಬೇಕೆಂದಿದ್ದೆ. ಈವೊಂದು ಸಣ್ಣ ವಿಷಯದ ಮೇಲೆ ದೊಡ್ಡ ಒಂದು ಗೊಂದಲ ನಡೆಯುತ್ತಿದೆ.

ತಮಗೆ ಗೊತ್ತಿದೆ ನಾನು ಯಾವ ಸಂಘಕ್ಕೆ ಸೇರಿದವನೆಂದು. ನಾನು ಹರಿಸುಕಾರ್ಡ್ ಬಳಕೆದಾರರ ಸಂಘಕ್ಕೆ ಸೇರಿದವನು ನನ್ನ ಅಭಿಪ್ರಾಯ ಕೇಳದೆ ಈ ಕೆಲಸ ನಡೆಯುತ್ತಿದೆ. ಇವರ ಹಸಿರು ಕಾರ್ಡಿಗೆ ಬಣ್ಣ ಹಚ್ಚಿದಾಗ ನನಗೆ ಅಸಮಾಧಾನವಾಗಿತ್ತು ಅದನ್ನು ರಾಜಕಾರಣದ ಕಾರಣದಿಂದ ಮಾಡಿದ್ದರು. ಹಸಿರು ಬಣ್ಣ ಹೆದರಿಸುವುದಕ್ಕೋಸ್ಕರ ಅದೇ ರೀತಿ ಅವರೇನು ಬಣ್ಣ ಹಾಕುವುದಕ್ಕೆ ಹೊರಟಿದ್ದಾರೆ ಅದಕ್ಕೂ ಕೆಟ್ಟ ಅರ್ಥ ಕಲ್ಪಿಸಬಾರದು ಜನ. ಈಗ ತಾನೇ ಮಂತ್ರಿಗಳು ತ್ರಿವರ್ಣಧ್ವಜಕ್ಕೆ ಗೌರವ ಕೊಟ್ಟು ನಾವು ಅದನ್ನು ಬಳಸುತ್ತಿದ್ದೇವೆಂದು ಹೇಳಿದರು. ಆದರೆ ನಿನ್ನೆ ಮೇಲ್ಮನೆಯಲ್ಲಿ ಈ ಕಾರ್ಯಕ್ರಮವನ್ನು ಪ್ರಕಟಣೆ ಮಾಡಿದ್ದಾರೆ. ಇದನ್ನು ಹರಿದು ಹಾಕುವುದಕ್ಕೆ ಅವಕಾಶ ಮಾಡಿಕೊಡಬಾರದು. ಹಸಿರುಕಾರ್ಡ್ ಬಳಕೆದಾರರ ಅಭಿಪ್ರಾಯವನ್ನು ನಾನು ಹೇಳುತ್ತೇನೆ. ದಯವಿಟ್ಟು ಎರಡು ಬಣ್ಣ ತೆಗೆದರೆ ಯಾವುದಾದರೂ ಮೂರನೆಯ ಬಣ್ಣ ನಾನ್ ಕಾಂಟ್ರಾವರ್ಸಿಯಲ್ ಕಲರ್ ಉಪಯೋಗಿಸಿ ಈ ಗೊಂದಲಕ್ಕೆ ಮುಕ್ತಾಯ ಹಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈ ಕಾರ್ಡನ್ನು ವಿತರಣೆ ಮಾಡಬೇಕಾದರೆ ಪ್ರಾಮಾಣಿಕವಾಗಿ ವಿತರಣೆಯಾಗಬೇಕು. ಇಲ್ಲಿ ಪ್ರಶ್ನೆ ಏನೆಂದರೆ, ಫೋಟೋ ಹಾಕಬೇಕಾದರೆ ಡಾ. ಅಂಬೇಡ್ಕರ್ ಫೋಟೋ ಮತ್ತು ಗಾಂಧಿಜಿಯವರ ಫೋಟೋ ಹಾಕಿ. ಆದರೆ ಇಂದಿರಾಗಾಂಧಿಯವರನ್ನು ಯಾರನ್ನು ಜನ ಮರೆತಿದ್ದಾರೆ ಈ ಕಾರ್ಡಿನಲ್ಲಿ ಅವರ ಫೋಟೋ ಹಾಕಿ ಜ್ಞಾಪಕ ಮಾಡಿಕೊಳ್ಳುವ ಪ್ರಯತ್ನ ಸರಿಯಲ್ಲ.

ಅಧ್ಯಕ್ಷರು : ಅದು ನಿಮ್ಮ ಅಭಿಪ್ರಾಯ ಆಯಿತು. ಅದು ಪ್ರಶ್ನೆಯಾಗಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಫೋಟೋವನ್ನು ಹಾಕಿ ಸಂಪೂರ್ಣ ರಾಜಕೀಯ ದುರುಪಯೋಗ ಮಾಡಿಕೊಳ್ಳುವ ನೀತಿ ಏನಿದೆ, ಇದನ್ನು ನಾವು ಪ್ರತಿಭಟನೆ ಮಾಡಿ ಭಾರತೀಯ ಜನತಾ ಪಕ್ಷದ ವಾಕ್‌ಔಟ್ ಮಾಡುತ್ತೇವೆ. ಸಭೆಯಿಂದ ಹೊರಗೆ ಹೋಗುತ್ತೇವೆ ಸ್ವಾಮಿ. ಏಕಸ್ಮಾತ್ ಇದನ್ನು ಮಂದ ಬುದ್ಧಿಯಿಂದ ಮುಂದುವರಿಸಿದರೆ ರಾಜ್ಯದ್ಯಂತ ಹೋರಾಟ ಮಾಡುವ ಪ್ರಸಂಗ ಬರುತ್ತಿದೆನ್ನುವ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಡುವುದಕ್ಕೆ ಇಚ್ಛಿಪಡುತ್ತೇನೆ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರುಗಳಾದ ಮಾನ್ಯ ಬಿ.ಎಸ್. ಯಡಿಯೂರಪ್ಪ ಕೆ.ಎಸ್. ಈಶ್ವರಪ್ಪ ಮತ್ತು ರುಕ್ಮಯ್ಯ ಪೂಜಾರಿಯವರು ಸಭಾತ್ಯಾಗ ಮಾಡಿದರು.)

ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೆ ಹಸಿರು ಕಾರ್ಡ್ ಪದ್ಧತಿಯನ್ನು ಜಾರಿಗೆ ತರುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಈ ಕಡೆ ಕುಳಿತುಕೊಂಡಿದ್ದರು. ಈ ಬಣ್ಣವನ್ನು ಉಪಯೋಗಿಸಬಾರದೆಂದು ತೀರ್ಮಾನವಾಗಿತ್ತು. ಅದನ್ನು ವಿರೋಧ ಮಾಡಿದ ಕಾರಣದಿಂದ ವಾಪಸ್ಸು ತೆಗೆದುಕೊಂಡಿದ್ದಾರೆ. ಇವತ್ತಿನ ದಿವಸ ಕಾಂಗ್ರೆಸ್ ಪಕ್ಷದ ಬಾವುಟದ ಬಣ್ಣವನ್ನು ಜೊತೆಗೆ ಅವರ ಪಕ್ಷದ ನಾಯಕಿಯ ಭಾವಚಿತ್ರವನ್ನು ಹಸಿರು ಕಾರ್ಡಿನಲ್ಲಿ ಮುದ್ರಿಸಿ ಹಂಚತಕ್ಕ ಕಾಂಗ್ರೆಸ್ ಪಕ್ಷದ ನೀತಿ ಏನಿದೆ ಅದನ್ನು ನಾನು ಉಗ್ರವಾಗಿ ಪ್ರತಿಭಟಿಸಿ ಸಭೆಯಿಂದ ಹೊರಗಡೆ ಹೋಗುತ್ತೇನೆ.

(ಈ ಹಂತದಲ್ಲಿ ಸಮಾಜವಾದಿ ಜನತಾದಳದ ಸದಸ್ಯರಾದ ಶ್ರೀ ಸಿ. ಬೈರೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ : ಇದು ಸರಿಯಾದುದಲ್ಲ. ತಾವು ಕೋಪಿಸಿಕೊಳ್ಳಬೇಡಿ. ಪುಹೂ ಅಂದರೇನು? ಇದು ಸರಿಯಲ್ಲ. ಸ್ವಾರ್ಥಕ್ಕೋಸ್ಕರ ಈ ಕೆಲಸ ಮಾಡುತ್ತಿದ್ದೀರಿ. ಇದನ್ನು ನಾನು ಸಂಪೂರ್ಣವಾಗಿ ವಿರೋಧಿಸಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಪಕ್ಷೇತರ ಸದಸ್ಯರಾದ ಮಾನ್ಯ ವಾಟಾಳ್‌ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ನಂದಿಕೂರು ಪಡುಬಿದ್ರೆಯಲ್ಲಿ ಉಪ ವಿದ್ಯುತ್ ಸ್ಥಾವರದ ಸ್ಥಾಪನೆ

410 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕಾಪು ಕ್ಷೇತ್ರದ ನಂದಿಕೂರು ಪಡುಬಿದ್ರೆಯಲ್ಲಿ ಪ್ರಾರಂಭಿಸಿರುವ ಉಷ್ಣ ವಿದ್ಯುತ್ ಸ್ಥಾವರ ಯಾವ ಹಂತದಲ್ಲಿದೆ?

ಆ) ಇದಕ್ಕಾಗಿ ಕೇಂದ್ರ ಸರ್ಕಾರದ ಪರಿಸರ ನೈರ್ಮಲ್ಯದ ಇಲಾಖೆಯ ಅನುಮತಿ ದೊರಕಿದೆಯೇ?

ಇ) ಈ ಯೋಜನೆಯ ನಿರ್ಮಾಣದ ವಿವಿಧ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಈ) ಇದುವರೆಗೆ ಕಾಮಗಾರಿಗಾಗಿ ತಗಲಿರುವ ವೆಚ್ಚವೆಷ್ಟು?

ಉ) ಈ ಯೋಜನೆಯು ವಿಳಂಬವಾದಾಗ ತ್ವರಿತಗೊಳಿಸುವುದರ ಸಲುವಾಗಿ ರಾಜ್ಯ ಸರಕಾರ ಕೈಗೆದುಕೊಂಡ ಕ್ರಮವೇನು?

ಶ್ರೀ ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):

ಅ) ಈ ಯೋಜನೆಯು ರಾಷ್ಟ್ರೀಯ ಶಾಖೋತ್ಪನ್ನ ವಿದ್ಯುತ್ ನಿಗಮದ್ದಾಗಿದ್ದು ಕರ್ನಾಟಕ ಸರ್ಕಾರದ್ದಲ್ಲ. ಕೇಂದ್ರ ಸರ್ಕಾರವು ತಾಂತ್ರಿಕ ಆರ್ಥಿಕ ಮತ್ತು ಪರಿಸರ ಅನುಮೋದನೆ ನೀಡಿದೆ. ಕೇಂದ್ರದ ಸಾರ್ವಜನಿಕ ಬಂಡವಾಳ ಮಂಡಳಿಯಿಂದ ಒಪ್ಪಿಗೆ ದೊರೆತಿದೆ. ಕೇಂದ್ರ ಸರ್ಕಾರದ ಒಪ್ಪಿಗೆ ಇನ್ನೂ ದೊರೆತಿಲ್ಲ.

ಆ) ಹೌದು

ಇ) ಕೇಂದ್ರ ಸರ್ಕಾರದ ಒಪ್ಪಿಗೆ ದೊರೆತ ನಂತರ ರಾಷ್ಟ್ರೀಯ ಶಾಖೋತ್ಪನ್ನ ವಿದ್ಯುತ್ ನಿಗಮವು ಈ ಯೋಜನೆಯ ವಿವಿಧ ಕಾಮಗಾರಿಗಳನ್ನು ಪ್ರಾರಂಭಿಸುವ ನಿರೀಕ್ಷೆಯಿದೆ.

ಈ) ಈ ಯೋಜನೆ ಎನ್.ಟಿ.ಪಿ.ಸಿ. ಯವರಿಂದ ಕಾರ್ಯಗತವಾಗುತ್ತಿರುವುದರಿಂದ ವೆಚ್ಚಗಳ ಬಗ್ಗೆ ವಿವರಗಳು ಇಲ್ಲ.

ಉ) ಕರ್ನಾಟಕ ರಾಜ್ಯ ಸರ್ಕಾರವು ಈ ಯೋಜನೆಯನ್ನು ಜರೂರಾಗಿ ಕೈಗೊಳ್ಳಲು ಅಗತ್ಯವಾದ ಒಪ್ಪಿಗೆ ನೀಡಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದೆ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಈ ಯೋಜನೆ ಕೇಂದ್ರಸರ್ಕಾರದ ಯೋಜನೆ. ಇದಕ್ಕೆ ಕೇಂದ್ರಸರ್ಕಾರದ ತಾಂತ್ರಿಕ ಮತ್ತು ಆರ್ಥಿಕ ಹಾಗೂ ಪರಿಸರ ಮಾಲಿನ್ಯ ಇಲಾಖೆಯ ಅನುಮತಿ ದೊರಕಿದೆಯೆಂದು ಹೇಳಿದ್ದಾರೆ.